ಯೋಜನೆಗಳಿಗೆ ಅನುಮತಿ ನೀಡುವಾಗ ಪರಿಸರ ಸಂರಕ್ಷಣೆಗೆ ವಿಧಿಸಿರುವ ಶರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸರ್ಕಾರವು ನಾರ್ಗಾಜುನ ವಿದ್ಯುತ್ ನಿಗಮ ನಿಯಮಿತಕ್ಕೆ ಆದೇಶಿಸಿದೆ

ಇ) ಪರಿಸರ ತಜ್ಞರು ಮತ್ತು ಸ್ಥಳಿಯರು ಈ ಯೋಜನೆಯಿಂದ ಪರಿಸರಕ್ಕೆ ಹಾನಿಯಾಗುತ್ತದೆಂದು ಅಭಿಪ್ರಾಯ ಪಟ್ಟಿರುವರು ಮಾನ್ಯ ಮುಖ್ಯ ಮಂತ್ರಿಯವರು ಸ್ಥಳೀಯ ಲೋಕಸಭಾ ಸದಸ್ಯರು, ವಿಧಾನ ಸಭಾ/ವಿಧಾನ ಪರಿಷತ್ ಸದಸ್ಯರು ಮತ್ತು ಸ್ಥಳೀಯ ಮುಖಂಡರ ಸಭೆಯನ್ನು ಕರೆದು ರಾಜ್ಯದಲ್ಲಿ ವಿದ್ಯುತ್ ಕೊರತೆ ಇರುವುದರ ಬಗ್ಗೆ ಎಲ್ಲರಿಗೂ ತಿಳಿಸಿ ಹೇಳಿದ್ದಾರೆ ಮತ್ತು ಯೋಜನೆಯಿಂದ ಪರಿಸರಕ್ಕೆ ಯಾವುದೇ ಹಾನಿಯಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದೆಂದು ಭರವಸೆ ನೀಡಿರುವರು

ಈ) ಉದ್ಭವಿಸುವುದಿಲ್ಲ

ಉ) ಸ್ಥಳೀಯ ಜನರ ಸಮ್ಮತಿಯನ್ನು ಪಡೆಯಲು ಮೀನುಗಾರ ಮುಖಂಡರು ಮತ್ತು ಸ್ಥಳೀಯ ಜನರನ್ನು ಒಳಗೊಂಡಂತೆ ಸುಮಾರು 165 ಜನರ ತಂಡವನ್ನು ಎನ್ ಟಿ ಪಿ ಸಿ ಯವರು ಕಾರ್ಯಗತಗೊಳಿಸಿರುವ ಆಂಧ್ರಪ್ರದೇಶದ ಕರಾವಳಿಯಲ್ಲಿನ ಸಿಂಹಾದ್ರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಅಧ್ಯಯನ ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗಿದೆ

ಊ) ಸ್ಥಾವರಕ್ಕೆ ಬಳಸಿದ ನೀರನ್ನು ಶುದ್ಧಿಕರಿಸಿ ಮತ್ತು ಮೀನುಗಾರಿಕೆಗೆ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪರಿಸರ ಮತ್ತು ಅರಣ್ಯ ಮಂತ್ರಾಲಯ, ಕೇಂದ್ರ ಸರ್ಕಾರದವರು ವಿಧಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಆದೇಶಿಸಿದೆ

377 (645) ಶ್ರೀ ಕೃಷ್ಣಾಪಾಲೇಮಾರ್ ಜೆ (ಸುರತ್ಕಲ್) ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ಕ್ರೀಡಾ ಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ, ಹಾಗೂ ಆ ಕುರಿತ ಯೋಜನೆಗಳನ್ನು ಸಿದ್ದಪಡಿಸಲಾಗಿದೆಯೇ
(ವಿವರಗಳನ್ನು ನೀಡುವುದು),

ಆ) ಹಾಗಿದ್ದಲ್ಲಿ ಈ ಯೋಜನೆಗಾಗಿ ನಿಗಧಿಪಡಿಸಿದ ಹಣದ ಮೊತ್ತ ಎಷ್ಟು,

ಇ) ತ್ವರಿತಗತಿಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು).

ಅ) ರಾಜ್ಯದ ಕೆಳಕಾಣಿಸಿದ 23 ಜಿಲ್ಲೆಗಳಲ್ಲಿ ಕ್ರೀಡಾ ಶಾಲೆ ಆರಂಭಿಸಲು ಸರ್ಕಾರಿ ಆದೇಶ ಸಂಖ್ಯೆ ವಾಪ್ರಯು 75 ಯುಸೇಕ್ರೀ 2006 ಬೆಂಗಳೂರು ದಿನಾಂಕ 12 1 2007 ರಲ್ಲಿ ಮಂಜೂರಾತಿ ನೀಡಲಾಗಿದೆ

1 ಹಾಸನ, 2, ರಾಯಚೂರು, 3 ದಾವಣಗೆರೆ, 4 ಬಿಜಾಪುರ, 5 ಬೀದರ್ 6 ಚಿಕ್ಕಮಗಳೂರು, 7 ಬೆಳಗಾಂ 8 ಬೆಂಗಳೂರು ಗ್ರಾಮಾಂತರ, 9 ತುಮಕೂರು 10 ಚಿತ್ರದುರ್ಗ 11 ಮಂಡ್ಯ 12 ಶೀವಮೊಗ್ಗ 13 ಹಾವೇರಿ 14 ಗದಗ 15 ಬಾಗಲಕೋಟೆ 16 ಕೊಪ್ಪಳ 17 ಉಡುಪಿ 18 ಕೋಲಾರ 19 ಚಾಮರಾಜನಗರ 20 ಉತ್ತರಕನ್ನಡ 21 ದಕ್ಷಿಣ ಕನ್ನಡ 22 ಮೈಸೂರು 23 ಧಾರವಾಡ

ಆಯಾ ಜಿಲ್ಲಾ ಪಂಚಾಯ್ತಿಗಳು ವಸತಿ ಸೌಕರ್ಯಕ್ಕಾಗಿ ಕಟ್ಟಡಗಳನ್ನು ಒದಗಿಸಿ, ಕಟ್ಟಡದ ನಿರ್ವಹಣಾ ವೆಚ್ಚ ಭರಿಸಬೇಕಾಗಿರುತ್ತದೆ ಕ್ರೀಡಾಪಟುಗಳ ಆಯ್ಕೆ, ಪ್ರವೇಶ, ಶೈಕ್ಷಣಿಕ ವೆಚ್ಚ, ಭೋಜನಾ ವೆಚ್ಚ ಅಗತ್ಯ ಕ್ರೀಡಾ ಸಾಮಗ್ರಿಗಳ ವೆಚ್ಚ ಪೀರೋಪಕರಣ ವೆಚ್ಚ ಸಿಬ್ಬಂದಿ ವೆಚ್ಚ ವೈದ್ಯಕೀಯ ಮುಂತಾದ ವೆಚ್ಚಗಳನ್ನು ರಾಜ್ಯ ವಲಯದಿಂದ ಭರಿಸಲಾಗುವುದು 6 ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯ್ತಿಗಳು ಕಟ್ಟಡ ಒದಗಿಸಿದ್ದು ಕ್ರೀಡಾ ಶಾಲೆಗಳನ್ನು ಪ್ರಾರಂಭಿಸಲಾಗಿದೆ 13 ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯತಿಗಳು ಕಟ್ಟಡ ಒದಗಿಸಿದ್ದು ಕ್ರೀಡಾ ಶಾಲೆ ಆರಂಭಿಸಲಾಗುತ್ತಿದೆ

ದಕ್ಷಿಣ ಕನ್ನಡ ಜಿಲ್ಲೆ ಶಿವಮೊಗ್ಗ ಉತ್ತರ ಕನ್ನಡ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಸೂಕ್ತ ಕಟ್ಟಡ ಒದಗಿಸುವಂತೆ ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಇವರನ್ನು ಕೋರಲಾಗಿದೆ

ಆ) ಆವರ್ತಕ ವೆಚ್ಚಕ್ಕಾಗಿ ರೂ 1 00 ಕೋಟಿಗಳನ್ನು ಮತ್ತು ಅನಾವರ್ತಕ ವೆಚ್ಚಕ್ಕಾಗಿ ರೂ 2 00 ಕೋಟಿಗಳು ಮಂಜೂರಾಗಿರುತ್ತದೆ

ಇ) ಎಲ್ಲಾ ಶಾಲೆಗಳಿಗೆ ಅಗತ್ಯವಾದ ಹಾಸಿಗೆ ದಿಂಬುಗಳನ್ನು ಒದಗಿಸಲಾಗಿದೆ ಭೋಜನ ವ್ಯವಸ್ಥೆಯನ್ನು ಗುತ್ತಿಗೆ ಆಧಾರದ ಮೇಲೆ ಖರೀದಿ ಮಾಡಲು ಟೆಂಡರ್ ಕರೆಯಲು ಅಗತ್ಯ ಮಂಚಗಳನ್ನು ಖರೀದಿಸಲು ಟೆಂಡರ್ ಕರೆಯಲು ಕ್ರೀಡಾ ಸಮವಸ್ತ್ರವಾದ ಟಿ ಷರ್ಟ್ಸ್, ಟ್ರಾಕ್ ಸೂಟ್ ಷೂ ಮತ್ತು ಸಾಕ್ಸ್ ಖರೀದಿಸಲು ಆಯಾ ಸಹಾಯಕ ನಿರ್ದೇಶಕರಿಗೆ ಅನುಮತಿ

ನೀಡಲಾಗಿದೆ ದಿನಾಂಕ 27 1 2007ರವರೆಗೆ ಈ ಕೆಳಕಂಡ ಜಿಲ್ಲೆಗಳಲ್ಲಿ ಕ್ರೀಡಾಶಾಲೆಗಳನ್ನು ಪ್ರಾರಂಭಿಸಲಾಗಿದೆ

1 ಹಾಸನ, 2, ರಾಯಚೂರು, 3 ದಾವಣಗೆರೆ, 4 ಬಿಜಾಪುರ, 5 ಬೀದರ್ 6 ಚಿಕ್ಕಮಗಳೂರು, 7 ಬೆಳಗಾಂ

378 (646) ಶ್ರೀ ಕೃಷ್ಣಪಾಲೇಮಾರ್ ಜೆ (ಸುರತ್ಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರಾವಳಿ ಪ್ರದೇಶದ ಜನರು ವರ್ಷಂಪ್ರತಿ ಎದುರಿಸುತ್ತಿರುವ ಕಡಲೆತದಿಂದ ಉಂಟಾಗುವ ಪರಿಣಾಮಗಳನ್ನು ಎದುರಿಸಲು ಸರ್ಕಾರ ಕೈಗೊಂಡ ಮುಂಜಾಗರೂಕತಾ ಕ್ರಮಗಳೇನು,

ಆ) ಕಡಲ್ಕೊರೆತಕ್ಕೆ ಶಾಶ್ವತ ಪರಿಹಾರ ರೂಪಿಸುವ ನಿಟ್ಟಿನಲ್ಲಿ ಸರ್ಕಾರದ ನಿಲುವುಗಳೇನು,

ಇ) ವರ್ಷ ವರ್ಷವೂ ತಾತ್ಕಾಲಿಕ ಪರಿಹಾರವನ್ನು ಒದಗಿಸಲು ಬದಲು ಶಾಶ್ವತ ಪರಿಹಾರ ಒದಗಿಸಲು ಸರ್ಕಾರ ಕ್ರಮ ಜರುಗಿಸುವುದೇ,

ಈ) ಕೇಂದ್ರ ಸರ್ಕಾರದ ನೆರವಿನೊಂದಿಗೆ ಕರಾವಳಿ ಪ್ರದೇಶದಲ್ಲಿ ತಡೆಗೋಡೆ ನಿರ್ಮಾಣ ಮಾಡಲು ಯೋಜನೆಯನ್ನು ರೂಪಿಸಲಾಗಿದೆಯೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) .

ಅ) ತೀವ್ರತರವಾದ ಸಮುದ್ರ ಕೊರತೆ ಸಂಭವಿಸಿದ ಪ್ರದೇಶಗಳಲ್ಲಿ ತಾತ್ಕಾಲಿಕ ಕಲ್ಲಿನ ತಡೆಗೋಡೆ ಅಥವಾ ಮರಳು ಚೀಲಗಳ ಬಂಡಿಂಗ್ ನಿರ್ಮಿಸಿ ತುರ್ತು ಸಂರಕ್ಷಣೆ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ

ಆ) Central Water & Power Research Station (C W P R S) Pune ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್ ಮೈಸೂರು ಸಂಸ್ಥೆಯವರು ಅಧ್ಯಯನ ಮಾಡಿ ನೀಡಿರುವ ತಾಂತ್ರಿಕ ವಿನ್ಯಾಸದಂತೆ ಈವರೆಗೆ ತೀವ್ರ ಸಮುದ್ರ ಕೊರತೆ ಸಂಭವಿಸಿದ ಪ್ರದೇಶಗಳಲ್ಲಿ ಸುಮಾರು 50 ಕಿ ಮೀ ಉದ್ದದ ಪ್ರದೇಶದಲ್ಲಿ ಅಂದಾಜು ವೆಚ್ಚ ರೂ 136 00 ಕೋಟಿ (ಪರಿಷ್ಕೃತ ಅಂದಾಜು ರೂ 292 00 ಕೋಟಿ) ಗಳಿಗೆ "ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆ" ಅಡಿಯಲ್ಲಿ ವಿನ್ಯಾಸಂತೆ ಕಲ್ಲಿನ ತಡೆಗೋಡೆ ನಿರ್ಮಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಇದು ಕೇಂದ್ರ ಸರ್ಕಾರವು ತಯಾರಿಸಿರುವ National Coastal Protection Project (N C P P) Phase-I ರಲ್ಲಿ ಸೇರ್ಪಡೆಯಾಗಿರುತ್ತದೆ ತೀವ್ರ ಸಮುದ್ರ ಕೊರತೆ ಸಂಭವಿಸುತ್ತಿರುವ